(1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು.

(2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವರು.

(3) ವಾಸದ/ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ.2000/- ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ.

ಎಪಿಎಲ್ ಪಡಿತರ ಚೀಟಿ :

ಗ್ರಾಮಾಂತರ ಪ್ರದೇಶದಲ್ಲಿ ಗರಿಷ್ಟ 12,000/- ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ, ಪಟ್ಟಣ ಪ್ರದೇಶದಲ್ಲಿ 17,000/- ರೂ.ಗಳ ವಾರ್ಷಿಕ ವರಮಾನಕ್ಕಿಂತ ಮೇಲ್ಪಟ್ಟ ಆದಾಯವುಳ್ಳ ಕುಟುಂಬಗಳು ಎಪಿಎಲ್ ಪಡಿತರ ಚೀಟಿಯನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.

ಉ) ಹೌದು.

ಊ) ಉದ್ಭವಿಸುವುದಿಲ್ಲ.

ರೈತರ ವಿದೇಶ ಪ್ರವಾಸ

1033 (795) ಶ್ರೀ ರಾಮಲಿಂಗಾ ರೆಡ್ಡಿ (ಬಿ.ಟಿ. ಎಂ. ಲೇಔಟ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 2009 ರಿಂದ ಇಲ್ಲಿಯವರೆಗೆ ಎಷ್ಟು ಜನ ರೈತರನ್ನು ಚೀನಾ ಮುಂತಾದ ಪ್ರದೇಶ ಪ್ರವಾಸಕ್ಕೆ ಕಳುಹಿಸಲಾಯಿತು;

ಆ) ಈ ವಿದೇಶ ಪ್ರವಾಸಕ್ಕೆ ನಿಯೋಜಿಸಲು ಅನುಸರಿಸಿದ ಮಾನದಂಡವೇನು;

ಇ) ಇದಕ್ಕಾಗಿ ಖರ್ಚಾದ ಹಣವೆಷ್ಟು;

ಈ) ಈ ನಿಯೋಗದ ಜೊತೆಯಲ್ಲಿ ಎಷ್ಟು ಅಧಿಕಾರಿಗಳು ಪ್ರವಾಸ ಕೈಗೊಂಡಿದ್ದು ಹಾಗೂ ಅವರಿಗೆ ತಗುಲಿದ ವೆಚ್ಚವೆಷ್ಟು;

ಉ) ಈ ಪ್ರವಾಸಕ್ಕಾಗಿ ಪ್ರತಿಯೊಂದು ಜಿಲ್ಲೆಯಿಂದ ರೈತರನ್ನು ನಿಯೋಜಿಸಲಾಗಿದೆಯೇ;

ಊ) ಹಾಗಿದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು?

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಜನವರಿ 2009ರಿಂದ ಇಲ್ಲಿಯವರೆಗೆ ಒಟ್ಟು 633 ಜನ ರೈತರನ್ನು ಚೀನಾ ಅಧ್ಯಯನ ಪ್ರವಾಸಕ್ಕೆ ಕಳುಹಿಸಲಾಯಿತು.

ಆ) ಈ ವಿದೇಶ ಪ್ರವಾಸಕ್ಕೆ ಅನುಸರಿಸಿದ ಮಾನದಂಡಗಳು ಈ ಕೆಳಕಂಡಂತಿರುತ್ತದೆ.

- ಸ್ವಂತ ಜಮೀನಿನಲ್ಲಿ ಸ್ವಯಂ ವ್ಯವಸಾಯ ಮಾಡುತ್ತಿರಬೇಕು.
- ಪ್ರಗತಿಪರ ರೈತರಾಗಿರಬೇಕು.
- ಓದಲು ಮತ್ತು ಬರೆಯಲು ತಿಳಿದಿರಬೇಕು.
- ಕೃಷಿ ಪಂಡಿತ ಪ್ರಶಸ್ತಿ ಮತ್ತು ಕೃಷಿ ಪ್ರಶಸ್ತಿ ಪಡೆದ ರೈತರಿಗೆ ಆದ್ಯತೆ ನೀಡುವುದು.
- 20 ರಿಂದ 60 ವರ್ಷಗಳ ವಯೋಮಿತಿಯಲ್ಲಿದ್ದು, ಉತ್ತಮ ಆರೋಗ್ಯ ಹೊಂದಿರಬೇಕು.
- ಪ್ರತಿ ತಾಲ್ಲೂಕಿನಿಂದ ಮೂರು ಜನ ರೈತರನ್ನು ಆಯ್ಕೆ ಮಾಡಬೇಕು.
- ಸರ್ಕಾರದ ನಿಬಂಧನೆಯಂತೆ ಮಹಿಳೆಯರಿಗೆ ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವರ್ಗದ ರೈತರನ್ನು ಆಯ್ಕೆ ಮಾಡಬೇಕು. ನಿಬಂಧನೆಯಂತೆ ತಾಲ್ಲೂಕು ಮಟ್ಟದಲ್ಲಿ ಆರಿಸಲು ಸಾಧ್ಯವಾಗದೇ ಇದ್ದ ಪಕ್ಷದಲ್ಲಿ ಜಿಲ್ಲಾ ಮಟ್ಟದಲ್ಲಿಯಾದರೂ ಮೇಲೆ ತಿಳಿಸಿದ ವರ್ಗದ ರೈತರು ಗಳನ್ನು ಕನಿಷ್ಟ ಸಂಖ್ಯೆಯಲ್ಲಿ ಆಯ್ಕೆ ಮಾಡಬೇಕಾಗಿರುತ್ತದೆ.

ಇ) ಈ ಕಾರ್ಯಕ್ರಮಕ್ಕಾಗಿ ಈವರೆಗೆ ರೂ.4,29,07,350/– ಖರ್ಚಾಗಿದೆ.

ಈ) ಈ ನಿಯೋಗದ ಜೊತೆಯಲ್ಲಿ 10 ಜನ ಅಧಿಕಾರಿಗಳು ಪ್ರವಾಸ ಕೈಗೊಂಡಿದ್ದರು ಹಾಗೂ ಅವರಿಗೆ ತಗುಲಿದ ವೆಚ್ಚ ರೂ. 3,39,750/–

ಉ) ಹೌದು.

ಈ ಪ್ರವಾಸಕ್ಕಾಗಿ ಪ್ರತಿಯೊಂದು ಜಿಲ್ಲೆಯಿಂದಲ್ಲೂ ರೈತರನ್ನು ನಿಯೋಜಿಸಲಾಗಿದೆ.

ಊ) ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಚೀನಾ ದೇಶದ ಅಧ್ಯಯನ ಪ್ರವಾಸ ಕೈಗೊಂಡಿರುವ ರೈತರ ಜಿಲ್ಲಾವಾರು ಸಂಖ್ಯೆ

ಕ್ರ. ಸಂ.	ಜಿಲ್ಲೆಯ ಹೆಸರು	ರೈತರ ಸಂಖ್ಯೆ
1	ಬಾಗಲಕೋಟೆ	18
2	ಬೆಂಗಳೂರು ನಗರ	52
3	ಬೆಂಗಳೂರು ಗ್ರಾಮಾಂತರ	11
4	ಬೆಳಗಾಂ	18
5	ಬಳ್ಳಾರಿ	26
6	ಬೀದರ್	03
7	ಬಿಜಾಪುರ	13
8	ಚಾಮರಾಜನಗರ	4
9	ಚಿಕ್ಕಬಳ್ಳಾಪುರ	30
10	ಚಿಕ್ಕಮಗಳೂರು	28
11	ಚಿತ್ರದುರ್ಗ	57
12	ದಾವಣಗೆರೆ	77
13	ಧಾರವಾಡ	46
14	ದಕ್ಷಿಣ ಕನ್ನಡ	02
15	ಗದಗ	27

16	ಗುಲ್ಬರ್ಗ	13
17	ಹಾಸನ	04
18	ಹಾವೇರಿ	47
19	ಕೊಡಗು	02
20	ಕೋಲಾರ	16
21	ಕೊಪ್ಪಳ	14
22	ಮಂಡ್ಯ	06
23	ಮೈಸೂರು	09
24	ರಾಯಚೂರು	24
25	ರಾಮನಗರ	02
26	ಶಿವಮೊಗ್ಗ	35
27	ತುಮಕೂರು	15
28	ಉಡುಪಿ	09
29	ಉತ್ತರ ಕನ್ನಡ	25
	ಒಟ್ಟು	**633**

ರಸ್ತೆ ಅಭಿವೃದ್ಧಿಗೆ ಅನುದಾನ ಹಂಚಿಕೆ

1034 (792) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2008–09ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿಗಾಗಿ ವಿವಿಧ ಬಾಬ್ತುಗಳಲ್ಲಿ ನೀಡಿರುವ ಹಣ ಎಷ್ಟು (ಜಿಲ್ಲಾ ಕ್ಷೇತ್ರವಾರು ವಿವರ ನೀಡುವುದು);

ಆ) ರಸ್ತೆ ಅಭಿವೃದ್ಧಿಗಾಗಿ ಎಲ್ಲಾ ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಮಾಡಲು ನಿಯಮಾವಳಿ ರೂಪಿಸಲಾಗಿದೆಯೇ? ಇದರ ಮಾನದಂಡವೇನು?